ತಾರೀಖು 6ನೆ ಜೂನ್ 1890.

ಇದರಿಂದ ಯಲ್ಲರಿಗೂ ತಿಳಿಯಪಡಿಸುವದೇನಂದರೆ,—ಮಾಗಡಿ ತಾಲ್ಲೂಕು ಸಾವಂದುರ್ಗದ ಜಂಗಲ್‌ನಲ್ಲಿ ಬಹಳ ಬಿದುರುಗಳು ಅಂದರೆ ದೊಡ್ಡದು ಸಂಣದು ಸಹ ಕಡಿಯಲು ಲಾಯಖ್ಖಾಗಿ ಯಿರ್ತತ್ತವೆ. ಯಿವುಗಳನ್ನ 10—7—90ನೇ ತಾರೀಖು ದಿನ 11 ಘಂಟೆಗೆ ಮಾಗಡೀಲಿ ತಾಲ್ಲೂಕು ಅಮಲೆದಾರ್ರವರ ರೂಬರೂಲ್ ಹರುಜು ಮಾಡುತ್ತೆ.

ಹರಾಜು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.

2. ಖಾಯಿಷ್ ವುಳ್ಳವರು ಫಾರೆಸ್ಟ್ ಇಲಾಖೆಯವರಿಂದ ಗೊತ್ತುಮಾಡಿಕೊಡುವ ಬ್ಲಾಕಿನಲ್ಲಿ ಬೊಂಬುಗಳನ್ನ ಕಡದು ಸಾಗಿಸಿ ಕೊಳ್ಳತಕ್ಕದ್ದಾಗಿರುತ್ತೆ.

3. ಆಕ್ಶೆರ್ ಸವಾಲ್ ಕೈದುಮಾಡಿದ ಕೂಡ್ಲೆ ಜಡ ಸವಾಲ್‌ದಾರನು ಹರಾಜು ಮೊಬಲಗಿನಲ್ಲಿ ಕೇಕಡಾ 25 ರೂಪಾಯಿ ಮೇರೆ ಡಿಪಾಜಿಟ್ ಯಿಡಬೇಕು. ಹರಾಜು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರು ಮಂಜೂರ್ಮಾಡಿದನಂತರ ಬಾಕಿ ಮೂರುಭಾಗದ ಮೊಬಲಗ್ ಕೊಟ್ಟು ಬಿಡಬೇಕು. ನಂತರ ಗೊತ್ತುಮಾಡಿ ಕೊಡುವ ಬ್ಲಾಕಿನಲ್ಲಿ ಬಿದರುಗಳನ್ನು ಕಡಿಯಲು ಅಪ್ಪಣೆ ಕೊಡಲಾಧೀತು, ಕಡಿಯುವಾಗ ಜಂಗಲ್‌ನಲ್ಲಿ ಇತರ ಮರ ಯಾ ಪೊರಗಳನ್ನು ಕಡಿಯಕೂಡದು, ಯಾ ಜಾಯಾ ಮಾಡಕೂಡದು, ಅಥವಾ ಮತ್ಯಾವ ಡಾಮೇಜನ್ನು ಮಾಡಕೂಡದು. ಇದಕ್ಕೆ ವಿರೋಧವಾಗಿ ನಡದರೆ ಫಾರೆಸ್ಟ್ ರೂಲ್ಸ್ ಮೇರೆ ಅವರು ಮಾಜಿಸ್ಟ್ರೇಟರಲ್ಲಿ ವಿಚಾರಣೆಗೆ ವಳಪಡುವರು.

4. ಅವಶ್ಯಕವಾದಷ್ಟು ಬಿದರು ಕಡಿಯೋಣ ಪೂರೈಸಿದ ಕೂಡ್ಲೆ ಫಾರೆಸ್ಟ್ ಇಲಾಖೇಯವರು ಯಿಣಿಕೆ ಮಾಡಿದ ನಂತರ ಹರಾಜುದಾರನು ಯುಕ್ತಾನುಸಾರ ಕೊಡುವ ವಾಯಿದೆಯಲ್ಲಿ ಭಂಡಿಗಳ್ಳಲ್ಲಿ ಸಾಗಿಸಿಕೊಳ್ಳಲು ಪದ್ಧತಿ ಮೇರೆ ಲೈಸೆನ್ಸ್ ಕೊಡಲಾಧೀತು.

5. ಬಾಕಿ ಅಂದರೆ ಹರಾಜುಮೊಬಲಗು ಬೈಕಿ ಮೂರು ಭಾಗದ ಹಣ ಕೊಡಲು ತಪ್ಪಿದರೆ ಡಿಪಾಜಿಟ್ ಬಗೆ ಮೊಬಲಗು ಸರ್ಕಾರಕ್ಕೆ ಕೇರಿಸಿಕೊಳ್ಳಲಾಧೀತು, ಅಲ್ಲದೆ ಹರಾಜುದಾರ್ರಿಗೆ ಕೊಟ್ಟಿರಬಹುದಾದ ಬ್ಲಾಕನ್ನು ಪುನಃ ಹರಾಜು ಮಾಡಿಸುತ್ತೆ. ಇದಕ್ಕಾಗಿ ತಗಲುವ ಖರ್ಚು ಮತ್ತು ಲುಕಸಾನಿಗೂ ಮೊದಲಿನ ಹರಾಜುದಾರನೇ ಗುರಿಯಾಗಿ ಯಿರತಕ್ಕದ್ದು.

ಪಿ. ಆರ್. ಕೃಷ್ಣಮೂರ್ತಿ,
ಡೆಪ್ಯೂಟಿ ಕಮ್ಮಿಷನರ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ದಿನಾಳೆಯಾದ ಡಿಕ್ರೀ ದೇಣೀದಾರ ಜಂಗಳೂರು ಪಿರ್ಕಿಕಬ್ಬೇಲಿ ಯಿರತಕ್ಕ ಗಿರಿಯಪ್ಪನ ವಿಷಯದಲ್ಲಿ—

ಸನ್ 1890ನೇ ಇಸವಿ ದಿವಾಣಿ ಕೇಸ್ ನಂಬರು 2.

ಹುಕುಂ

ಮೇಲ್ಕಂಡ ಗಿರಿಯಪ್ಪನು, ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿರಾದ ಮೆಸ್ಟರ್ ಯಲ್. ಅನಂತಸ್ವಾಮಿರ್ಯಂಗರವರ ರೂಬರೂ ಅರ್ಜೀದಾರನಾದ ಗಿರಿಯಪ್ಪನ ಪರವಾಗಿ ಅಡ್ವೊಕೇಟ್ ಮೆಸ್ಟರ್ ಯಸ್. ನರಸಿಂಹ್ಯಯ್ಯಂಗಾರ್ಯನ್ನು ಮತ್ತು ಸದ್ಗೀರುವನ ಬೇಣೀವರ್ಕಾದ 1—2 ಮತ್ತು 7ನೇ ಪ್ರತಿವಾದಿಗಳನ್ನು ಖುದ್ದಾಗಿ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೀದಾರ್ರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲೀ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ —2—4—5—6—8—9 ಇವರುಗಳು ಹಾಜರಾಗಲಿಲ್ಲಾ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಗಿರಿಯಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರಿ ಮೂಲಕ ದಿವಾಳಿಯಾಡವನೆಂದು ನಿರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿನೋಜನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೊಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿರಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1890ನೇ ಇಸವಿ ಮೇ 23ನೇ ತಾರೀಖಿನಲ್ಲಿ ಈ ಕೋರ್ಟುನೊಹರಿ ನಮ್ಮ ದಸ್ತಖತ್ತೊಡನೆ ಕೊಡಲ್ಪಟ್ಟಿತು.

2 ಪ

428

ಸೂಲದಪಟ್ಟಿ.

ನಂಬರ್.	ಲೇಣೇದಾರ್ರ ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೆ ಉಂಟುದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಟಿಪ್ಪಣಿ.
1	ಚಿಕ್ಕಬಳ್ಳಾಪುರದಲ್ಲಿ ಯಿರುವ ಅಂಬಕೆಕಚೇರಿ ಮಾಜಿ ಶಿರಸ್ತೆದಾರ್ ಕೃಷ್ಣಪ್ಪನವರು ..	31—13—6	1889	ಬೆಂಗಳೂರು ಸಬ್ ಜಡ್ಜಿ ಕೋರ್ಟ್ 89ನೇ ಇಸವಿ ಸ್ಮಾಲ್‌ಕಾಜ್ ನಂ. 685ನೇ ಡಿಕ್ರಿ ಬಗೆ	
2	ಬೆಂಗಳೂರು ದೊಡ್ಡಪ್ಯಾಟೆಯಲ್ಲಿಯಿರುವ ಬ್ಯಾಡರ ಹಳ್ಳಿ ಸಂಜೀವಯ್ಯ.	20—0—0	1887	ಪತ್ರದ ಬಾಬತು	
3	ಬೆಂಗಳೂರು ಸಂತೂಸಾ ಪ್ಯಾಟೆಯಲ್ಲಿ ಯಿರುವ ಪೆರ್ಪಷ ಹೆಡ್ ಗುಮಾಸ್ತೆ ನಾರಣಪ್ಪ ..	491—10—2	1887	ಬೆಂಗಳೂರು ಮುನಿಸಿಫ್ ಕೋರ್ಟ್ 87ನೇ ಇಸವಿ ಅರಿಜಿನಲ್ 430ನೇ ನಂ. ಡಿಕ್ರಿ ಬಾಬತು	
4	ಬೆಂಗಳೂರು ಚಿಕ್ಕಪ್ಯಾಟೆಯಲ್ಲಿರುವ ಈನಮುಕ್ಕ್ಯಲ ಕೃಷ್ಣಯ್ಯ ..	25—0—0	1888	ಖಾಲಿ ಕಾಗದದ ಪತ್ರದ ಬಾಬತು	
5	ಬೆಂಗಳೂರು ಪ್ಯಾಟುಮರ್ಚಂಟ್ಸ್ ಬ್ಯಾಂಕ್ ..	75—0—0	1887	ಭಾಪಾ ಕಾಗದದ ತಮಸೂಕು	
6	ಬೆಂಗಳೂರು ತರಗಿನವಂಡಿ ಸೋತಂಣನ ಮುನಿಯಪ್ಪ.	200—0—0	1886	ಲೇವಾದೇವಿ ಬಾಬತು	
7	ಡಿಟೋ ಕಬ್ಬ್ಯಪ್ಯಾಟೆಲಿ ಯಿರುವ ಕೀಲಿ ಮುನಿಯಪ್ಪ ..	50—0—0	1884	ಪತ್ರದ ಬಾಬತು ವಸೂಲ್ ಜಾತಾ ಬಾಕಿ	
8	ಡಿಟೋ ಪ್ಯಾಟೆ ನೀಲಿನಂಜುಂಡಪ್ಪ ..	50—0—0	1887	ಪತ್ರದ ಬಾಬತು	
9	ಬೆಂಗಳೂರು ಚಿಕ್ಕಪ್ಯಾಟೆ ಜವಳಿವ್ಯಾಪಾರದ ವರದಯ್ಯ ..	8—1—0	1888	ಜವಳಿ ಬಾಬತು	
	ಜುಮ್ಲಾ	951—8—8			

ಯಲ್. ಅನಂತಸ್ವಾಮಿರಾವ್,
ಸಬ್ ಜಡ್ಜಿ.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರಿ ದೇಣೇದಾರ ಮೈಸೂರು ಲಷ್ಕರ್ ಮೊಹಲ್ಲಾದಲ್ಲಿರುವ ಸುಬ್ಬಮ್ಮನ ವಿಷಯದಲ್ಲಿ—

ಸ್ಯ 1890ನೇ ಇಸವಿ ದಿವಾಳಿ ಕೇಸ್ ನಂಬರ್ 52.

ಹುಕುಂ.

ಮೇಲ್ಕಂಡ ಸುಬ್ಬಮ್ಮನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಕನು ಈ ಕೋರ್ಟು ರೂಬರೂ ಅರ್ಜಿದಾರಳಾದ ಸುಬ್ಬಮ್ಮನು ಖುದ್ದು ಹಾಜರು ಮತ್ತು ಸದರೀಯವಳ ಲೇಣೇದಾರ್ರಾದ 1ನೇ ನರಸೋಜಿ, 2ನೇ ಕೃಷ್ಣಾಜಪ್ಪ ಖುದ್ದು ಹಾಜರ್ಇವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾರಂದರೆ—

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಸುಬ್ಬಮ್ಮನು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗಾತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸೂಲಕ್ಕೂ ಕ್ಷಕ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1890ನೇ ಇಸವಿ ಜೂನ್ 11ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸೂಲದ ಪಟ್ಟಿ.

ನಂಬರು.	ಲೇಣೇದಾರ್ರ ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಬಲಗು.	ಯಾವಾಗ ದೇಣಿ ಕಂಟೊದದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ಶ್ರೀರಂಗಪಟ್ಟಣ ತಾಲ್ಲೂಕು ವೇಲಕೋಟೇಲಿರುವ ನರಸೋಜಿ ..	20—5—8	..	ಡಿಕರಿ ಬಾಬತು	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಪ್ಯಾರ್ಟೀಷನ್ ಆಫಿಸ್.

23ನೇ ಮಾಹೆ ಮೇ 1890ನೇ ಇಸವಿ.

ಇಸ್ತಿಹಾರ್ನಾಮೆ.

ಹೊನ್ನವಳ್ಳಿ ಪ್ಯಾರ್ಟೀಷನ್ ವಾಚರಾಗಿ ಯಿದ್ದು ಹಾಲಿ ಮೃತಪಟ್ಟು ಯಿರುವ ಶೇಷ ಯಂಬುವನಿಗೆ ಸದರೀಯವನು ಸದರೀ ಪ್ಯಾರ್ಟೀಷನಿನಲ್ಲಿ ಕಾಮಗಾರಿ ಮಾಡಿಸಿದ್ದಕ್ಕಾಗಿ (83—5—6) ರೂಪಾಯಿಗಳು ಸಲ್ಲಬೇಕಾಗಿ ಯಿದೆ. ಈ ಮೊಬಲಗ್ಯೆ ಬಾಧ್ಯತೆವುಳ್ಳ ಜನಗಳು ಈ ತಾರೀಖು ಲಾಗಾಯಿತು ಆರು ತಿಂಗಳ ವಳಗಾಗಿ ಹಕ್ಕುದಾರಿ ಸಾಬಿತಿಕೇಟೆ ನೊಡನೆ ನಮ್ಮ ಆಫಿಸಿಗೆ ಅರ್ಜೀಬರದು ಕೊಳ್ಳಬೇಕು, ಈ ವಾಯಿದೆ ಪೂರೈಸಿದನಂತರ ಮೊಬಲಗು ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ. ನಂತರ ಯಾವ ಹಕ್ಕುದಾರಿಯನ್ನೂ ವಿಚಾರಿಸುವದಿಲ್ಲ.

ಯಸ್. ಬಾಪೂರಾವ್,
ಸಬ್ ಅಸಿಸ್ಟೆಂಟ್ ಕಮಿಸರ್ವೇಟರ್ ಪ್ಯಾರ್ಟೀಷನ್.

ಪ್ರಸಿದ್ಧ ಪತ್ರಿಕೆ.

ತಾರೀಖು 5ನೇ ಜೂ೯ 1890.

ಮೈಸೂರಿನಲ್ಲಿ ಕಟ್ಟಲ್ಪಟ್ಟಿರತಕ್ಕ "ಜ್ಯಾಬಿಲಿ ಇನ್‌ಸ್ಟಿಟ್ಯೂಟ್" ಯೆಂಬ ಕಟ್ಟಡದಲ್ಲಿ ಇಡಲ್ಪಡುವದಕ್ಕೋಸ್ಕರ ಶಿಲೆಯಲ್ಲಿ ಆಗಲಿ ಆಥವಾ ಲೋಹದಲ್ಲಿ ಆಗಲಿ ಮಾಡಲ್ಪಟ್ಟ [illegible] ದೇವರುಗಳ ವಿಗ್ರಹಗಳನ್ನು ಚಿಕ್ಕದರ ಆಡಿ ವಂತಕ್ಕೆ 2½ ರೂಪಾಯಿ ದರದ ವೇರೆ ಕೊಂಡುಕೊಳ್ಳುತ್ತೇವೆ. [illegible], 2 ಅಡಿ 3 ಅಂಗುಲ ಅಥವಾ 1 ಆಡಿ 3 ಅಂಗುಲ ಯಿರಬೇಕು. ಯಿಷ್ಟ ವಿದ್ದವರು ಬರದುಕೊಳ್ಳಬಹುದು.

ಸ್ಟ್ಯಾಂಡಿಷ್ ಲೀ,
ಸ್ಯಾನಿಟರಿ ಇಂಜನಿಯರ್ ಮೈಸೂರ್ ಸ್ಪೆಷಲ್ ಇಂಪ್ರೂವಮೆಂಟ್ಸ್ ಡಿವಿಜ್ಞ.

ತಾರೀಖು 15ನೇ ಜೂ೯ 1890.

ಇನ್ನೇನವ ಪ್ರಕಟಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟ್ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಹಿಡುವಳಿಯಲ್ಲಿ ಇಲ್ಲದ ಕಂ[illegible]ತ್ತಿಲ್ಲದಂಥಾ ಮತ್ತು ಗೊತ್ತುಮಾಡಲ್ಪಟ್ಟ, ಜವಿರ್ಕಗಳು ಅಡಗಿರುವ ಮತ್ತು ಹಳೆ ಮತ್ತು ಹೊಸ ಲೈಕ್‌ಗಳ ಮಧ್ಯೆ ಇರುವ ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳ ಗ್ರಾಮ ಬೇಲಿಗಳ ಅಮರಾಯಿ ಅಮುಯಾಯಿ ಬೇಲಿಗಳ (ಅಮೃತ ಮಹಲ್ ಕಾವಲ್‌ಗಳು, ಪ್ಲಾಂಟೇರ್ಷನ್‌ಗಳು ಸಂದಲ್ ಮತ್ತು ಫಾರೆಸ್ಟ್ ರಿಪ್ರೊಡಕ್ಷನ್ ಬ್ಲಾಕ್ ವಿನಹ) ಪಸಾರೆ ಹುಟ್ಟಿ[illegible]ನ್ನು 1890ನೇ ಇಸವಿ ಮೇ ಮಾಹೆ ಗುರ್ರೀ ತಾರೀಖು ಲಾಗಾಯಿತು 1891ನೇ ಇಸವಿ ಏಪ್ರೆಲ್ 30ನೇ ತಾರೀಖಿನವರಿಗೆ ಜಮಾ[illegible]ದಾರಿಯು ಯಾವ ರೀತಿ ಹರಾಜ್ ಮಾಡಿದಲ್ಲಿ ಸರ್ಕಾರಕ್ಕೆ ಆದಾಯ ಬರಬಹುದೆಂಬ ಅವರಿಗೆ ಸೂಕ್ತ ತೋರುತ್ತೋ ಆ[illegible]ಕು ಅಮಲ್ದಾರ್ರ ರೂಬರೂ ಹೋಬಳಿವಾರ್ ಯಾ ತಾಲ್ಲೂಕು ವಟ್ಟಾಗಿಯಾಗಲಿ 1890ನೇ ಜುಲೈ 2ನೇ ತಾರೀ[illegible]ಷ್ ಮೂಲಕ ವಿಕ್ರಯಿಸಲ್ಪಡುತ್ತೆ.

ಹರಾಜ್ ಷರತ್ತು ವಗೈರೆ ಬಗ್ಗೆ ಸ೯ 1890ನೇ ಇಸವಿ ಮೇ ತಿಂ[illegible]ರು ಗೆಜೆಟ್ಟಿನ[illegible]ನೇ ಪುಟದಲ್ಲಿ ಛಾಪಿಸಲ್ಪಟ್ಟಿರುವ 1890ನೇ ಇಸವಿ ಏಪ್ರೆಲ್ 22ನೇ ಮತ್ತು ಂ ನೋಟಿಸ್ ಓ[illegible]